# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 03 / 2022

ಸಿಡಬ್ಲ್ಯೂ- 1
ಪಿಡಬ್ಲ್ಯೂ- 1

ದಿನಾಂಕಃ **04.09.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ನವನೀತಾ |
| ತಂದೆಯ ಹೆಸರುಃ | - | ರಾಜಶೇಖರ |
| ವಯಸ್ಸುಃ | -? | 44 ವರ್ಷ |
| ಉದ್ಯೋಗಃ | - | ಏನು ಇಲ್ಲ. |
| ವಾಸಸ್ಥಳಃ | - | ಯಲಸತ್ತಿ ಗ್ರಾಮ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಮೃತ ರಾಜಶೇಖರ ನನ್ನ ಗಂಡನಾಗಬೇಕು. ಅವರು ಕೆಎಸ್‌ಆರ್‌ಟಿಸಿ ಬಸ್ಸಿನ ನಿರ್ವಾಹಕರಾಗಿದ್ದರು. .

2021 ರಲ್ಲಿ ನನ್ನ ಗಂಡನಿಗೆ ಅಪಘಾತ ಆಗಿತ್ತು. ನನ್ನ ಗಂಡನು ಕರ್ತವ್ಯ ನಿರ್ವಹಿಸಲು ಹೋಗಿ ಬರುವಾಗ ಅಪಘಾತ ಆಗಿತ್ತು. ಅಪಘಾತದ ವಿಷಯವನ್ನು ಬೇರೆಯವರು ನನಗೆ ಪೋನ್ ಮಾಡಿ ತಿಳಿಸಿದ್ದರು ಆವಾಗ ನಾನು ಮನೆಯಲ್ಲಿ ಇದ್ದೆ. ಅಪಘಾತವು ಯಾವ ರೀತಿ ಆಗಿತ್ತು ಎಂದು ಅವರು ನನಗೆ ಹೇಳಿರುವುದಿಲ್ಲ. ಅಪಘಾತ ಪಡಿಸಿದ ವಾಹನದ ನಂಬರ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಅಪಘಾತ ಪಡಿಸಿದ ವಾಹನವು ಯಾವದು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತ ಪಡಿಸಿದ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತದ ವಿಷಯ ನನಗೆ ತಿಳಿದ ನಂತರ ನಾನು ಅಪಘಾತ ಸ್ಥಳಕ್ಕೆ ಹೋಗಿದ್ದೆ ಆದರೆ ಅಲ್ಲಿಂದ ನನ್ನ ಗಂಡನನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ನಾನು ಸರಕಾರಿ ಆಸ್ಪತ್ರೆಗೆ ಹೋದಾಗ ಅಲ್ಲಿ ವೈದ್ಯರು ನನ್ನ ಗಂಡನನ್ನು ಹೆಚ್ಚಿನ ಉಪಚಾರಕ್ಕಾಗಿ ಕಲಬುರಗಿಗೆ ಕರೆದುಕೊಂಡು ಹೋಗಿ ಎಂದು ತಿಳಿಸಿದ್ದರು. ಸದರಿ ಆಸ್ಪತ್ರೆಯವರು ನನ್ನ ಗಂಡನಿಗೆ ಶಸ್ತ್ರ ಚಿಕಿತ್ಸೆ ಮಾಡಿಸಬೇಕೆಂದು ಹೇಳಿದ್ದರು. ಆದ್ದರಿಂದ ನನ್ನ ಗಂಡನಿಗೆ ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿದ್ದರು ಆದರೆ ಅವರು ದಿನಾಂಕಃ 16.08.2021 ರಂದು ಮೃತಪಟ್ಟಿದ್ದರು. ನಂತರ ನಾನು ದೂರನ್ನು ನೀಡಿದ್ದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ

1(ಎ) ಎಂದು ಗುರುತಿಸಲಾಯಿತು. ದೂರನ್ನು ನೀಡಿದ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ದಿನಾಂಕಃ 16.09.2021 ರ ನೋಟೀಸ್ ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ದಿನಾಂಕಃ 16.09.2021 ರಂದು ತಾನು ನೀಡಿದ ಉತ್ತರದ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಚ್ಚಳಿಕೆ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ನಿಪಿ 3 ರಿಂದ 5 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಅವುಗಳ ಮೇಲೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ದಿನಾಂಕಃ 02.08.2021 ರಂದು ರಾತ್ರಿ 8-45 ಗಂಟೆಗೆ ನಾನು ಮತ್ತು ಚಾಸಾ-7 ರವರು ಮನೆಯಲ್ಲಿದ್ದಾಗ ಚಾಸಾ-6 ರವರು ಅಪಘಾತದ ವಿಷಯವನ್ನು ತಿಳಿಸಿದ್ದರು ಎಂದರೆ ಸರಿ. ಚಾಸಾ-6 ರವರು ಅಪಘಾತ ವಿಷಯವನ್ನು ತಿಳಿಸಿ ತಾನು ತನ್ನ ಕರ್ತವ್ಯವನ್ನು ಮುಗಿಸಿಕೊಂಡು ಯಾದಗಿರಿಯ ಹೊಸ ಬಸ್ ನಿಲ್ದಾಣದ ಹತ್ತಿರ ನಿಂತಾಗ ನನ್ನ ಗಂಡನಾದ ರಾಜಶೇಖರ ಇತನು ಕರ್ತವ್ಯ ಮುಗಿಸಿಕೊಂಡು ತನ್ನ ಮೋಟಾರು ಸೈಕಲ್ ಕೆಎ-33-ಎಸ್-3618 ನೇದ್ದನ್ನು ಚಲಾಯಿಸಿಕೊಂಡು ಮನೆಗೆ ಹೊರಟಾಗ ಚಾಸಾ-6 ರವರು ನನ್ನ ಗಂಡನಿಗೆ ಗಂಜ್ ಕ್ರಾಸ್ ವರೇಗೆ ಬಿಡು ಎಂದು ಹೇಳಿದ್ದಾಗ ಅವರು ನನ್ನ ಗಂಡನು ಚಾಸಾ-6 ರವರು ಹಿಂಬದಿಯ ಸವಾರನ್ನಾಗಿ ಹತ್ತಿಸಿಕೊಂಡು ಅವರೇ ವಾಹವನ್ನು ಚಲಾಯಿಸಿಕೊಂಡು ಚಾಸಾ-6 ರವರನ್ನು ಗಂಜ್ ಕ್ರಾಸ್ ಹತ್ತಿರ ಬಿಟ್ಟು ಮರಳಿ ಹೊಸಳ್ಳಿ ಕ್ರಾಸ್ ಕಡೆಗೆ ಹೋಗಬೇಕೆನ್ನುವಷ್ಟರಲ್ಲಿ ಚಾಸಾ-6 ರವರು ನೋಡು ನೋಡುತ್ತಿದಂತೆ ಹೊಸಳ್ಳಿ ಕ್ರಾಸ್ ಕಡೆಗೆಯಿಂದ ಮುಂಡರಗಿ ಕಡೆಗೆ ಹೊರಟಿದ ಲಾರಿ ಚಾಲಕನು ಲಾರಿಯನ್ನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ಚಾಲನೆಯ ಮೇಲೆ

ನಿಯಂತ್ರಣ ಕಳೆದುಕೊಂಡು ನನ್ನ ಗಂಡನು ಚಲಾಯಿಸುತ್ತಿದ್ದ ಮೋಟಾರು ಸೈಕಲ್ ನೇದ್ದಕ್ಕೆ ಜೋರಾಗಿ ಡಿಕ್ಕಿ ಹೊಡೆದು ಅಪಘಾತ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-6 ರವರು ಹೋಗಿ ನೋಡಲಾಗಿ ನನ್ನ ಗಂಡನಿಗೆ ಒಳಪೆಟ್ಟಾಗಿ ಮೂರ್ಚೆ ಹೋಗಿದ್ದರು. ಅಪಘಾತ ಪಡಿಸಿದ ಲಾರಿ ಚಾಲಕನು ಲಾರಿಯನ್ನು ಸ್ಥಳದಲ್ಲಿ ಬಿಟ್ಟು ಓಡಿ ಹೋಗಿರುತ್ತಾನೆ ಅದರ ನಂಬರ ಕೆಎ-32-ಡಿ-0062 ಇದ್ದು ಓಡಿ ಹೋದ ಲಾರಿ ಚಾಲಕನನ್ನು ಚಾಸಾ-6 ರವರು ನೋಡಿದ್ದು ಸದರಿ ಚಾಲಕನನ್ನು ನೋಡಿದರೆ ನಾನು ಗುರುತಿಸುತ್ತೇನೆ ಎಂದು ನನಗೆ ತಿಳಿಸಿದ್ದರು ಎಂದರೆ ಸಾಕ್ಷಿಯು ಅಪಘಾತ ವಿಷಯವನ್ನು ತಿಳಿಸಿದ್ದರು ಎಂದು ಹೇಳುತ್ತಾರೆ. ಅಪಘಾತ ಆದ ಕುರಿತು ನಿಪಿ 1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುತ್ತವೆ ಎಂದರೆ ಸರಿಯಲ್ಲ. ನನ್ನ ಗಂಡನು ಮೃತಪಟ್ಟ ನಂತರ ದಿನಾಂಕಃ 16.08.2021 ರಂದು ಶವ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಕಾಲಕ್ಕೆ ನಿಪಿ 2 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಅಪಘಾತದ ಕುರಿತು ದಿನಾಂಕಃ 16.08.2021 ರಂದು ನಾನು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಹೇಳಿಕೆಯಲ್ಲಿ ದಿನಾಂಕಃ 16.08.2021 ರಂದು

--------------------------------------------------------------------------------------------------------

--------------------------------------------------------------------------------------------------------

-----------------------------ಪುರವಣಿ ಹೇಳಿಕೆ ನಿಜವಿರುತ್ತದೆ ಎಂದು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಅಪಘಾತದ ಕುರಿತು ದಿನಾಂಕಃ 04.08.2021 ರಂದು ನಾನು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಹೇಳಿಕೆಯಲ್ಲಿ ದಿನಾಂಕಃ 04.08.2021 ರಂದು

--------------------------------------------------------------------------------------------------------

--------------------------------------------------------------------------------------------------------

------------------------------ಪುರವಣಿ ಹೇಳಿಕೆ ನಿಜವಿರುತ್ತದೆ ಎಂದು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಕುರಿತು ಪೊಲೀಸರು ದಿನಾಂಕಃ 16.09.2021 ರಂದು ನಿಪಿ 3 ರಂತೆ ನೋಟೀಸ್ ನೀಡಿದ್ದು ಅದಕ್ಕೆ ನಾನು ನಿಪಿ 4 ರಂತೆ ಉತ್ತರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 5 ರಂತೆ ನಷ್ಟಭತ್ಯೆ ಮುಚ್ಚಳಿಕೆಯನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಂತೆ ದೂರನ್ನು ನೀಡಿ ನಿಪಿ 6 ಮತ್ತು 7 ರಂತೆ ಪುರವಣಿ ಹೇಳಿಕೆಯನ್ನು ನೀಡಿದರು ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಬಿ.ಬಿ.ಕೆ. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.